[Govt. of Karnataka C.R.P. 67]

| |
|---|
| **Deposition Sheets (RP.No.57) Form No.4 (Civil)** |

**IN THE COURT OF CIVIL JUDGE & J.M.F.C., KARKALA.**

**Criminal Case No. 1567/2023**

**.................................................Vs.....................................**

ಪಿ.ಡಬ್ಲ್ಯು : 8 ಸಿ.ಡಬ್ಲ್ಯು : 21

ಸಾಕ್ಷಿದಾರನ ಹೆಸರು : ನಿರಂಜನ್ ಕೆ ಹೆಗ್ಡೆ

ತಂದೆಯ ಹೆಸರು : ಕೃಷ್ಣ ಎಸ್ ಹೆಗ್ಡೆ

ಪ್ರಾಯ : 44 ವರ್ಷ

ಉದ್ಯೋಗ : ಪೊಲೀಸ್ ಸಬ್ ಇನ್ಸ್‌ಪೆಕ್ಟರ್

ವಾಸ : ಉತ್ತರ ಕನ್ನಡ ಜಿಲ್ಲೆ

ದಿನಾಂಕ 25.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು 2022 ರಿಂದ 2023 ರವರೆಗೆ ಹೆಬ್ರಿ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 17.06.2023 ರಂದು ಸಂಜೆ ವೇಳೆ ಸುಮಾರು 6.00 ಗಂಟೆಗೆ ನಾನು ಹೆಬ್ರಿ ಪೊಲೀಸ್ ಠಾಣೆಯಲ್ಲಿರುವಾಗ ಸಾರ್ವಜನಿಕರು ಠಾಣೆಗೆ ದೂರವಾಣಿ ಕರೆ ಮಾಡಿ ಬೆಟ್ ನಂ. 1 ನಾಡ್ಪಾಲ್ ಗ್ರಾಮದ ಜಕ್ಕನಮಕ್ಕಿ ಎಂಬಲ್ಲಿ 2 ಲಾರಿಗಳು ಅಪಘಾತಕ್ಕೆ ಒಳಗಾಗಿ ರಸ್ತೆ ಬ್ಲಾಕ್ ಆಗಿದೆ ಎಂದು ತಿಳಿಸಿದ್ದು ಅದರಂತೆ ನಾನು ಠಾಣೆಯಿಂದ ಹೊರಟು ಸ್ಥಳಕ್ಕೆ ಭೇಟಿ ನೀಡಿ ರಸ್ತೆಯ ಮಧ್ಯ ಭಾಗದಲ್ಲಿ ಕೆಎ-14 -ಸಿ - 0074 ನಂಬರಿನ ಟಿಪ್ಪರ್ ವಾಹನ ಮತ್ತು ಎದುರಿನಲ್ಲಿ ಕೆಎ-20-ಎಎ-9049 ನಂಬರಿನ ಐಸರ್ ಕಂಪನಿಯ ಕ್ಯಾಂಟರ್ ವಾಹನ. ಕ್ಯಾಂಟರ್ ವಾಹನದ ಚಾಲಕ ಬಾಲಕೃಷ್ಣ ಎಂಬುವರಿಗೆ ಗಂಭೀರ ಗಾಯವಾಗಿ ಹೆಬ್ರಿಯಲ್ಲಿರುವ ಸಮೂದಾಯ ಆರೋಗ್ಯ ಕೇಂದ್ರಕ್ಕೆ ತಕ್ಷಣಕ್ಕೆ

ಕರೆದುಕೊಂಡು ಹೋಗಲಾಯಿತು. ಸಮುದಾಯ ಕೇಂದ್ರದ ವೈದ್ಯರು ಬಾಲಕೃಷ್ಣ ಎಂಬತಾನು ಮೃತನೆಂದು ಘೋಷಿಸಿರುತ್ತಾರೆ.

3. ಕೆಎ-14 ಸಿ -0074 ನಂಬ್ರದ ಟಿಪ್ಪರ್ ವಾಹನದ ಚಾಲಕ ಅರುಣ್ ಜೆ ಡಿ ಎಂಬುದಾಗಿ ತಿಳಿಯಿತು. ನಂತರ ಹೆಬ್ರಿಯಿಂದ ಸೋಮೇಶ್ವರಕ್ಕೆ ಹೋಗುವ ರಸ್ತೆಯಾಗಿದ್ದು ಅಲ್ಲಿ ವಾಹನದ ದಟ್ಟನೆ ಅಧಿಕವಾಗಿದ್ದು ವಾಹನ ಸುಗಮ ಸಂಚಾರದ ದೃಷ್ಟಿಯಿಂದ 2 ವಾಹನಗಳನ್ನು ಅಲ್ಲಿಂದ ತೆರವುಗೊಳಿಸಿ ಹೆಬ್ರಿ ಪೊಲೀಸ್ ಠಾಣಾ ಆವರಣದಲ್ಲಿ ತಂದು ಇರಿಸಲಾಯಿತು. ಸಂಚಾರ ವ್ಯವಸ್ಥೆ ಮತ್ತು ಅಪಘಾತಗೊಂಡ ವ್ಯಕ್ತಿಯನ್ನು ಆಸ್ಪತ್ರೆಗೆ ತಕ್ಷಣಕ್ಕೆ ಸಾಗಿಸುವ ಭರದಲ್ಲಿ ಅಲ್ಲಿನ ಛಾಯ ಚಿತ್ರಗಳನ್ನು ತೆಗೆಯಲು ಸಾಧ್ಯವಾಗಲಿಲ್ಲ. ಅಲ್ಲಿಂದ ಠಾಣೆಗೆ ಬಂದಾಗ ಚಾಸಾ-1 ರವರು ದೂರು ನೀಡಿರುತ್ತಾರೆ. ಅದನ್ನು ಸ್ವೀಕರಿಸಿಕೊಂಡು ಅದರಂತೆ ಪ್ರ ವ ವರದಿಯನ್ನು ಕಲಂ 279, 304(ಎ) ಅಕ್ರ 35/2023 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ದೂರವಾಣಿ ಮೂಲಕ ಮೇಲಾಧಿಕಾರಿಯವರಿಗೆ ಪ್ರಕರಣದ ಮಾಹಿತಿಯನ್ನು ತಿಳಿಸಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-22 ರವರಿಗೆ ಹಸ್ತಾಂತರಿಸಿರುತ್ತೇನೆ.

4. ದಿಃ18.06.2023 ರಂದು ಚಾಸಾ-23 ರವರು ಠಾಣಾ ಆವರಣದಲ್ಲಿ ಸ್ವತ್ತು ಸ್ವಾಧೀನತಾ ಮಹಜರನ್ನು ಪಂಚರಾದ ಚಾಸಾ-6 ಮತ್ತು 7 ರವರ ಸಮಕ್ಷಮ ನಡೆಸಿರುತ್ತಾರೆ. ಅಪಪರಾಧ ಸ್ಥಳದಿಂದ ತೆರವುಗೊಳಿಸಿ ತಂದ ಟಿಪ್ಪರ್ ವಾಹನ ಕೆಎ-14-ಸಿ-0074 ಹಾಗೂ ಐಸರ್ ಟ್ಯಾಂಕರ್ ವಾಹನ ನಂ. ಕೆಎ-20-ಎಎ-9049 ನ್ನು ಗುರುತಿಸಿರುತ್ತೇನೆ.

5. ಈಗ ನಾನು ನಿಪಿ-1 ದೂರು ನೋಡಿದ್ದು ಅದರಲ್ಲಿರುವ ಸಹಿ ನನ್ನದು. ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಈಗ ನಾನು ಈ ಪ್ರಕರಣದ ಪ್ರ ವ ವರದಿಯನ್ನು ನೋಡಿದ್ದು ಅದರಲ್ಲಿರುವ ಸಹಿ ನನ್ನದು. ಸದ್ರಿ ದಾಖಲೆಯನ್ನು ನಿಪಿ-17 ಎಂದು, ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ಈಗ ನಾನು ನಿಪಿ-14 ಸ್ವತ್ತು ಸ್ವಾಧೀನತಾ ಮಹಜರನ್ನು ನೋಡಿದ್ದು ಅದರಲ್ಲಿರುವ ಸಹಿ ನನ್ನದು. ಸಾಕ್ಷಿಯ ಸಹಿಯನ್ನು ನಿಪಿ-14(ಸಿ) ಎಂದು ಗುರುತಿಸಲಾಯಿತು. ನಿಪಿ-2, 3, 5, 6, 7, 8, 9, 13 ಭಾವಚಿತ್ರದಲ್ಲಿರುವ ಅಪಘಾತಕ್ಕೆ ಒಳಪಟ್ಟ ವಾಹನಗಳನ್ನು ನೋಡಿ ಗುರುತಿಸಿದ್ದೇನೆ.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ವಕೀಲರಿಂದಃ

6. ನನಗೆ ಅಪಘಾತ ಆಗಿದೆ ಎಂದು ಸಂಜೆ 6.00 ಗಂಟೆಗೆ ದೂರವಾಣಿ ಕರೆ ಬಂದಿರುತ್ತದೆ. ಯಾರು ಕರೆ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಕೂಡಲೇ ನಾನು ಘಟನಾ ಸ್ಥಳಕ್ಕೆ 2 ಸಿಬ್ಬಂದಿಗಳೊಂದಿಗೆ ಹೋಗಿರುತ್ತೇನೆ. ಘಟನಾ ಸ್ಥಳಕ್ಕೆ ಹೋಗುವ ಮುನ್ನ ಠಾಣಾ ಡೈರಿಯಲ್ಲಿ ನಮೂದು ಮಾಡಿರುತ್ತೇನೆ. ಅಪಘಾತ ನಡೆದಿದೆ ಎಂದು ಹೇಳುವ ಸ್ಥಳದಿಂದ ಠಾಣೆಗೆ 10 ಕಿ ಮೀ ದೂರ ಇದೆ. ಅಲ್ಲಿಗೆ ತಲುಪಲು 10 ನಿಮಿಷ ಆಗಬಹುದು. ಘಟನಾ ಸ್ಥಳದಲ್ಲಿ ಸುಮಾರು ಜನ ಸೇರಿದ್ದರು. ಘಟನಾ ಸ್ಥಳದಲ್ಲಿ ಅಪಘಾತದ ಬಗ್ಗೆ ಅಲ್ಲಿ ನೆರೆದಿರುವುವವರು ಮಾಹಿತಿ ನೀಡಿರುತ್ತಾರೆ ಯಾರು ಎಂದು ಗೊತ್ತಿಲ್ಲ. ಪಿರ್ಯಾದು ನೀಡಿದ ನಂತರ ನಾನು ಘಟನಾ ಸ್ಥಳಕ್ಕೆ ಹೋಗಿದ್ದಲ್ಲ.

7. ಚಾಸಾ-1 ರವರು ಠಾಣೆಗೆ 7.30 ಗಂಟೆಗೆ ಬಂದು ದೂರು ನೀಡಿರುತ್ತಾರೆ. ಘಟನಾ ಸ್ಥಳದಲ್ಲಿ ಪಿರ್ಯಾದು ತೆಗೆದುಕೊಳ್ಳದೆ ಇರಲು ಯಾವುದೇ ತೊಂದರೆ ಇರಲಿಲ್ಲ. ಚಾಸಾ-1 ರವರು ಯಾರು ಮತ್ತು ಅವರಿಗೆ ಏನು ಕೆಲಸ ಎಂದು ತಿಳಿದುಕೊಂಡಿರುತ್ತೇನೆ. ಚಾಸಾ-1 ರವರು 2 ನೇ ಆರೋಪಿಯ ವಾಹನದ ಹಿಂದಿನಿಂದ ಇನ್ನೊಂದು ಟಿಪ್ಪರ್ ವಾಹನದಲ್ಲಿ ಜಲ್ಲಿಯನ್ನು ತುಂಬಿಸಿಕೊಂಡು ಬರುತ್ತಿದ್ದರು. ಪ್ರ ವ ವರದಿಯನ್ನು ತಯಾರಿಸಿದ ನಂತರವೇ ಘಟನ ಸ್ಥಳದಲ್ಲಿ ಇದ್ದ ವಾಹನಗಳನ್ನು ಅಲ್ಲಿಂದ ತೆರವುಗೊಳಿಸಿದೇನು. ಚಾಸಾ-1 ರವರು ಒಬ್ಬರೇ ಠಾಣೆಗೆ ಬಂದಿರುತ್ತಾರೆ. ಅಪಘಾತ ನಡೆದಿದೆ ಎಂದು ಹೇಳುವ ಸಮಯದಿಂದ ಪಿರ್ಯಾದು ನೀಡಿದೆ ಎಂದು ಹೇಳುವ ಸಮಯ ಅಂದಾಜು ಒಂದುವರೆ ಗಂಟೆ.

8. ಘಟನಾ ಸ್ಥಳಕ್ಕೆ ಸಿಬ್ಬಂದಿಯೊಂದಿಗೆ ಹೋಗಿದ್ದೆ ಅಲ್ಲಿ ಸ್ಥಳದ ಭಾವಚಿತ್ರವನ್ನು ಮೊಬೈಲ್ ನಲ್ಲಿ ಭಾವಚಿತ್ರವನ್ನು ಸೆರೆ ಹಿಡಿಯಬಹುದಿತ್ತು ಎಂದರೆ ಆ ಸಮಯದಲ್ಲಿ ಸಿಲುಕಿಕೊಂಡಿದ್ದ ಬಾಲಕೃಷ್ಣರವರ ಜೀವವನ್ನು ರಕ್ಷಿಸುವುದು ಮುಖ್ಯ ಉದ್ದೇಶವಾಗಿತ್ತು ಹಾಗೂ ಅಲ್ಲಿ ಇದ್ದ ಲಾರಿಯನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟಿರುತ್ತೇವೆ. ಆ ಸಮಯದಲ್ಲಿ ಆರ್ ಟಿ ಓ ಸಿಬ್ಬಂದಿ ಇರಲಿಲ್ಲ. ಈ ಪ್ರಕರಣದಲ್ಲಿ ನಾನು ಭಾಗಶಃ ತನಿಖಾಧಿಕಾರಿ. ಅಪಘಾತ ಆಗಿದೆ ಎಂದು ಹೇಳುವ ರಸ್ತೆ ತಿರುವಿನಿಂದ ಕೂಡಿದ ರಸ್ತೆ ಎಂದರೆ ಸರಿಯಲ್ಲ. ಅಪಘಾತ ನಡೆದಿದೆ ಎಂದು ಹೇಳುವ ಸ್ಥಳ ಹೆಬ್ರಿಯಿಂದ ಬರುವ ರಸ್ತೆಯ ಎಡಮೂಲೆ ಎಂದರೆ ರಸ್ತೆಯ ಮಧ್ಯ ಭಾಗದಲ್ಲಿ ಆಗಿರುತ್ತದೆ.

ಈಗ ನೋಡಿದ ನಿಡಿ-1 ಭಾವಚಿತ್ರದಲ್ಲಿ ಅಪಘಾತಪಡಿಸಿದ ವಾಹನ ಎಡಮೂಲೆಯಲ್ಲಿ ಅಪಘಾತಪಡಿಸಿರುತ್ತದೆ ಎಂದರೆ ಸರಿಯಲ್ಲ. ಅಪಘಾತ ನಡೆದಿದೆ ಎಂದು ಹೇಳುವ ಸ್ಥಳದ 2 ಬದಿಯಲ್ಲಿ ತಡೆಗೋಡೆ ಇದೆ ಎಂದರೆ ಕಬ್ಬಿಣದ ತಡೆಗೊಡೆ ಇದೆ. ಅಪಘಾತ ನಡೆದಿದೆ ಎಂದು ಹೇಳುವ ಸ್ಥಳದಲ್ಲಿ ಟಿಪ್ಪರ್ ಲಾರಿ ತಡೆಗೊಡೆಯ ಎಡಭಾಗದಲ್ಲಿ ಉಜ್ಜಿಕೊಂಡು ನಿಂತಿದೆ ಎಂದರೆ ಢಿಕ್ಕಿಯಾದ ನಂತರ ಆ ಕಡೆ ಹೋಗಿರುತ್ತದೆ. ತಡೆಗೋಡೆ ದಾಟಿಕೊಂಡು ವಾಹನ ಹೋಗಲು ಅವಕಾಶ ಇಲ್ಲ ಎಂದರೆ ಸರಿ.

9. ನಿಡಿ-1 ಭಾವಚಿತ್ರದಲ್ಲಿ ಈಚರ್ ವಾಹನ ಟಿಪ್ಪರ್ ವಾಹನಕ್ಕೆ ಗುದ್ದಿರುವಂತಹದು ಎಂದರೆ ಸರಿಯಲ್ಲ. ಈಚರ್ ವಾಹನ ತೀರ ಬಲಬದಿಗೆ ಬಂದು ಢಿಕ್ಕಿಹೊಡೆದಿರುತ್ತದೆ ಎಂದರೆ ಸರಿಯಲ್ಲ. ನಾನು ಸ್ಥಳ ಮಹಜರು ಮತ್ತು ನಕ್ಷೆಯನ್ನು ಸ್ಥಳದಲ್ಲಿ ತಯಾರಿಸಿರುವುದಿಲ್ಲ. ಸಾಕ್ಷಿ ಮುಂದುವರಿದು ಈ ಪ್ರಕರಣದ ತನಿಖಾಧಿಕಾರಿಯವರು ತಯಾರಿಸಿರುತ್ತಾರೆ. ಅಪಘಾತ ನಡೆದಿದೆ ಎಂದು ಹೇಳುವ ದಿನವೇ ಸ್ಥಳ ಮಹಜರು ಮತ್ತು ನಕ್ಷೆಯನ್ನು ತಯಾರಿಸಿ ಭಾವಚಿತ್ರವನ್ನು ತೆಗೆದಿದ್ದಲ್ಲಿ ಯಾರು ಯಾರಿಗೆ ಢಿಕ್ಕಿಪಡಿಸಿರುತ್ತಾರೆ ಎಂದು ತಿಳಿದು ಬರುತ್ತಿತ್ತು ಎಂದರೆ ಆ ಸಮಯದಲ್ಲಿ ಸ್ಥಳ ಮಹಜರು ಮತ್ತು ನಕ್ಷೆಯನ್ನು ತಯಾರಿಸಲು ಸಾಧ್ಯ ಇರಲಿಲ್ಲ. ಈ ಪ್ರಕರಣದಲ್ಲಿ ಈಚರ್ ವಾಹನದ ಚಾಲಕ ಮೃತ ಬಾಲಕೃಷ್ಣ ಜಿ ಅವರನ್ನು 1 ನೇ ಆರೋಪಿಯನ್ನಾಗಿ ಕಾಣಿಸಿರುತ್ತೇನೆ ಎಂದರೆ ಸರಿ. ಈಚರ್ ವಾಹನದ ಚಾಲಕನ ತಪ್ಪು ಎಂದು ತನಿಖೆ ಸಮಯದಲ್ಲಿ ಕಂಡು ಬಂದಿದ್ದ ಕಾರಣ 2 ನೇ ಆರೋಪಿಯಾದ ಅರುಣ್ ರವರ ವಿರುದ್ಧ ದೋಷಾರೋಪಣಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

10. ಚಾಸಾ-1 ಮತ್ತು 2 ನೇ ಆರೋಪಿಯ ವಾಹನದ ಮಾಲೀಕರು ಒಬ್ಬರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರಿಗೆ ದೂರು ದಾಖಲು ಮಾಡಲು ಒತ್ತಾಯಪಡಿಸಿದಕ್ಕೆ ಅವರು ದುರಾು ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-14 ಸ್ವತ್ತು ಸ್ವಾಧೀನತಾ ಮಹಜರನ್ನು ದಿಃ18.06.2023 ರಂದು ಠಾಣೆಯ ಮುಂಭಾಗದಲ್ಲಿ ಸುಮಾರು ಬೆಳಗ್ಗೆ 11.30 ರಿಂದ 12.00 ಗಂಟೆಯವರೆಗೆ ತಯಾರಿಸಿರುತ್ತೇವೆ. ಸದ್ರಿ ಮಹಜರಿಗೆ ಚಾಸಾ-2, 6 ಮತ್ತು 7 ಸಹಿ ಮಾಡಿರುತ್ತಾರೆ. ನಿಪಿ-14 ರ ಪ್ರಕಾರ ವಾಹನಗಳ ಮೌಲ್ಯವನ್ನು ಚಾಸಾ-23 ರವರು ನಿಗದಿಪಡಿಸಿರುತ್ತಾರೆ.

11. ನಾನು ಸರಿಯಾದ ತನಿಖೆಯನ್ನು ಮಾಡದೆ ದೋಷಾಪೂರಿತ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 2 ನೇ ಅರೋಪಿಗೂ ಈ ಪ್ರಕರಣಕ್ಕೂ, ಭಾವಚಿತ್ರಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ